## ವಾರದ ಪತ್ರ

### ಜೀವನ ದರ್ಶನ

'ಬೆಳಗಾಗಿ ನಾನೆದ್ದು ಯಾರ್‍ಯಾರ ನೆನೆಯಲಿ ಎಳ್ಳು ಜೀರಿಗೆ ಬೆಳೆಯೋಣ' ಎಂದು ಹಾಡುತ್ತಾ ಮನೆ ಕೆಲಸವೇ ಹೆಣ್ಣಿಗೆ ಗತಿ ಎನ್ನುತ್ತಿದ್ದ ಕಾಲವಿತ್ತು. ಆದರೆ ಇಂದು ಮಹಿಳೆಯರು ಎಲ್ಲ ಕ್ಷೇತ್ರದಲ್ಲೂ ಮುಂದುವರಿದಿದ್ದಾರೆ. ಭೂಮಿಯಷ್ಟು ಸಹನೆ ಉಳ್ಳ ಹಲವು ಮಹಿಳೆಯರು ಕೃಷಿ ಕೆಲಸವನ್ನೂ ಮಾಡಬಲ್ಲೆವು ಎಂದು ತೋರಿಸಿದ್ದಾರೆ. ರಾಸಾಯನಿಕ ಗೊಬ್ಬರವನ್ನು ಬಿಟ್ಟು ಸಾವಯವ ಗೊಬ್ಬರ ಬಳಕೆ, ಟ್ರ್ಯಾಕ್ಟರ್‌ನಿಂದ ಉಳುಮೆ ಮಾಡಿ ಯಶಸ್ವಿ ರೈತ ಮಹಿಳೆಯರಾಗಿ ಇತರರಿಗೂ ಮಾದರಿಯಾಗಿದ್ದಾರೆ. ಇಂತಹ ಹಲವು ಮಾದರಿ ಮಹಿಳೆಯರ ಸಂದರ್ಶನ ಮತ್ತು ಅವರ ತೋಟಗಳನ್ನು ವೀಕ್ಷಕರಿಗೆ ಪರಿಚಯಿಸಿರುವ ಚಂದನ ವಾಹಿನಿಯ ಕಾರ್ಯಕ್ರಮ 'ಕೃಷಿ ದರ್ಶನ'ದಲ್ಲಿ ಹಣ್ಣು, ಹೂವು, ತರಕಾರಿ ಉತ್ಪಾದನೆ ಪಶುಸಗೋಪನೆ, ಕೋಳಿ ಸಾಕಾಣಿಕೆ ಮುಂತಾದವುಗಳಲ್ಲಿ ಹೆಚ್ಚಿನ ಕೆಲಸಗಳನ್ನು ಮಾಡಿದ್ದಾರೆ. ಮಣ್ಣಿನ ಮಕ್ಕಳಿಗಾಗಿ ಕೃಷಿ ಜೀವನ ದರ್ಶನ ಪ್ರಸ್ತುತಪಡಿಸುತ್ತಿರುವ ಚಂದನ ವಾಹಿನಿಗೆ ಧನ್ಯವಾದಗಳು.

—ವೀಣಾ ಶಂಕರ್

## ವಿಶೇಷ ಕವಿಗೋಷ್ಠಿ

ಇತ್ತೀಚೆಗೆ ಚಂದನದಲ್ಲಿ ಅಂಗವಿಕಲರ ಕವಿಗೋಷ್ಠಿ ತುಂಬಾ ಚೆನ್ನಾಗಿ ಮೂಡಿ ಬಂತು. ಅಂಗವಿಕಲ ಕವಿಗಳು ಒಬ್ಬರಿಗಿಂತ ಒಬ್ಬರು ತಮ್ಮ ಕವನಗಳನ್ನು ಸೊಗಸಾಗಿ ಓದಿದರು. ಕೆಲವು ಕವನಗಳಲ್ಲಿ ಪ್ರಕೃತಿಯ ವರ್ಣನೆಗಳು ಕೂಡ ಇದ್ದವು. ಕಣ್ಣಿದ್ದವರೂ ನಾಚಬೇಕು. ಅದರಲ್ಲೂ ಮುದಿಗೆರೆ ರಮೇಶ್ ಕುಮಾರ್‌ರವರು ನಾವು ಅಂಧರಾಗಿದ್ದ ಮಾತ್ರಕ್ಕೆ ಅಂಧಕಾರದಲ್ಲಿಯೇ ಇರಬೇಕೆ? ಎಂದು ಬಹು ವಿಷಾದದಿಂದ ನುಡಿದರು. ಅಂಗವಿಕಲರಿಗಾಗಲಿ, ಅಂಧರಿಗಾಗಲೀ ಬೇಕಾಗಿರುವುದು ಅವಕಾಶಗಳೇ ಹೊರತು ಅನುಕಂಪವಲ್ಲ ಎಂಬುದು ಸತ್ಯವಾದ ಮಾತು. ಇಂತಹ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕಾಗಿ ಚಂದನಕ್ಕೆ ಅಭಿನಂದನೆಗಳು.

—ಸು. ವಿಜಯಲಕ್ಷ್ಮಿ ಶಿವಮೊಗ್ಗ

## ಸುದ್ದಿ ಸಮಗ್ರವಾಗಿರಲಿ..

ಸಮಗ್ರ ಸುದ್ದಿಗಾಗಿ 'ಚಂದನ' ವಾರ್ತೆಗಳನ್ನು ವೀಕ್ಷಿಸುತ್ತಿದ್ದ ನಾವು ಇತ್ತೀಚೆಗೆ ಅಂತಹ ಸುದ್ದಿಗಳನ್ನು ಕಾಣುತ್ತಿಲ್ಲ. ಸುದ್ದಿ ವಾಚನದ ಸಂದರ್ಭದಲ್ಲಿ ರಾಷ್ಟ್ರ ಮತ್ತು ರಾಜ್ಯ ಮಟ್ಟದ ಪ್ರಮುಖ ಸುದ್ದಿಗಳನ್ನು ಎರಡು ಓಡು ಪಟ್ಟಿಗಳಲ್ಲಿ ತೋರಿಸಲಾಗುತ್ತಿತ್ತು. ಈಗ ಅದು ಕಾಣೆಯಾಗಿದೆ. ಅನ್ಯ ಭಾಷೆಯ ಕಾರ್ಯಕ್ರಮಗಳ ಸುದ್ದಿ ವಾಚನದ ನಂತರ ಅವರು ಮಾತನಾಡುವುದನ್ನು ಎರಡು ಮೂರು ನಿಮಿಷ ತೋರಿಸಲಾಗುತ್ತದೆ. ಹೀಗೆ ಸಮಯ ವ್ಯರ್ಥ ಮಾಡುವ ಬದಲು ಇನ್ನಷ್ಟು ಸುದ್ದಿಗಳನ್ನು ಪ್ರಸಾರ ಮಾಡಬಹುದು. ಸರಳ ಮತ್ತು ವೈವಿಧ್ಯ ಸುದ್ದಿ ಪ್ರಸಾರಕ್ಕೆ ಹೆಸರಾಗಿರುವ ಚಂದನ ವಾಹಿನಿಯು ಈ ವಿಷಯಗಳತ್ತ ಗಮನಹರಿಸಲಿ ಎಂದು ನಮ್ಮ ಆಶಯ.

—ಹೆಚ್.ಕೆ.ಎನ್. ಮೂರ್ತಿ ಬೆಂಗಳೂರು

## ಶಾಲಾ ಪಠ್ಯವೂ ಬಂದರೆ…

ತಜ್ಞರ ಅಭಿಪ್ರಾಯದ ಮೇರೆಗೆ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಅನುಕೂಲಕ್ಕೆ ಆನ್ ಲೈನ್ ತರಗತಿಗಳನ್ನು ದೂರದರ್ಶನದ ಚಂದನ ವಾಹಿನಿಯಲ್ಲಿ ಪ್ರಸಾರ ಮಾಡಲಾಗುತ್ತಿದೆ. ಅಂತೆಯೇ ಖಾಸಗಿ ವಾಹಿನಿಗಳು ಇಂತಹ ಪ್ರಯೋಗ ಮಾಡಬಹುದು. ಅವರು ಪದೇ ಪದೇ ಹಲವಾರು ವಿಷಯಗಳನ್ನು ಪುನರ್ ಪ್ರಸಾರ ಮಾಡುವ ಬದಲು ಈ ಒಂದು ತಿಂಗಳು ವಿದ್ಯಾರ್ಥಿಗಳಿಗೆ ಅನುಕೂಲವಾಗುವ ಹಾಗೆ ಉತ್ತಮ ಬೋಧಕರ ಸಹಕಾರದೊಂದಿಗೆ ವಿದ್ಯಾರ್ಥಿಗಳಿಗೆ ಉಪಯುಕ್ತವಾಗುವ ತರಗತಿಗಳು ಪ್ರಾರಂಭಿಸಲಿ. ಪಠ್ಯದ ಜೊತೆಗೆ ವಿದ್ಯಾರ್ಥಿಗಳಿಗೆ ಆರೋಗ್ಯ, ಶುಚಿತ್ವ ಹಾಗೂ ಉತ್ತಮ ಆಹಾರವನ್ನು ತೆಗೆದುಕೊಳ್ಳುವ ಬಗೆ ತಜ್ಞ ವೈದ್ಯರಿಂದ ಮಕ್ಕಳಿಗೆ ತಿಳಿವಳಿಕೆ ನೀಡಿ ಆರೋಗ್ಯದ ಅರಿವನ್ನು ಮೂಡಿಸಬಹುದು.

—ಎಂ.ಎಸ್. ಉಷಾ ಪ್ರಕಾಶ್, ಮೈಸೂರು

## ಹರಟೆಯ ಕನ್ನಡತಿ

ಕಲರ್ಸ್‌ಕನ್ನಡದ 'ಕನ್ನಡತಿ' ನಿಜಕ್ಕೂ ಹಳಿತಪ್ಪಿದೆ. ಇದರಲ್ಲಿ ಹರಟೆ ಕೂಡ ವಿಪರೀತವಾಯ್ತು. ಇದರ ಕಥೆಯನ್ನು ಹರ್ಷ, ಭುವಿ ಮತ್ತು ವರೂ ಚಿಕ್ಕಮ್ಮನ ಕುಟುಂಬದ ಸುತ್ತ ಹೆಣೆದಿದ್ದು ಬೇಸರ ಹುಟ್ಟಿಸುತ್ತಿದೆ. ಇದರ ಬದಲು, ಅಮ್ಮಮ್ಮಾ ಅವರಿಗೆ ಆಯುರ್ವೇದ ಚಿಕಿತ್ಸೆ ಕೊಡಿಸುವ ಕ್ರಮವನ್ನು ನಿರೂಪಿಸಿದ್ದರೆ ನೋಡುಗರಿಗೂ ಉಪಯೋಗ ಆಗ್ತಿತ್ತೇನೋ ಅನಿಸುತ್ತೆ.

—ರಮಾಮಣಿ, ಮೈಸೂರು

ರಜೆ ಇಷ್ಟೊಂದಾ?: ಒಂದು ಕಂಪನಿಯ ಜವಾಬ್ದಾರಿಯುತ ಸ್ಥಾನದಲ್ಲಿರುವ 'ಕನ್ನಡತಿ'ಯ ಹರ್ಷ ಈ ರೀತಿ ಗುರುತು ಪರಿಚಯ ಇಲ್ಲದವರ ಮನೆಯಲ್ಲಿ ಠಿಕಾಣಿ ಹಾಕಿರುವುದು ಸರಿಯಲ್ಲ. ಭುವಿ, ವರು, ಬಿಂದು ಇವರಿಗೆಲ್ಲಾ ಇಷ್ಟೊಂದು ರಜಾ ಹೇಗೆ ಸಿಕ್ಕಿತು? ಸಂಬಂಧವೇ ಇಲ್ಲದವರ ಮನೆಯ ವಿಚಾರಗಳಲ್ಲಿ ಇವರು ಮೂಗು ತೂರಿಸುವುದು ಸಮಂಜಸವೇ? ಅಮ್ಮಮ್ಮ ಹೇಗಿದ್ದಾರೆ ಎನ್ನುವ ಆತಂಕ ಮಗನಿಗೆ ಇಲ್ಲ. ಮೊದಲು ಎಲ್ಲರನ್ನೂ ಬೆಂಗಳೂರಿಗೆ ವಾಪಸ್ಸು ಕಳಿಸಿ ಧಾರಾವಾಹಿಯ ಗುಣಮಟ್ಟ ಕಾಪಾಡಿ.

—ಸಿ.ಎನ್. ಮುಕ್ತಾ ಮೈಸೂರು.

ಹಳ್ಳ ಹಿಡಿಯುತ್ತಿದೆ ಕನ್ನಡತಿ: ಜನಪ್ರಿಯ 'ಕನ್ನಡತಿ' ಧಾರಾವಾಹಿ ಇತ್ತೀಚೆಗೆ ಸ್ವಲ್ಪ ಹಳ್ಳ ಹಿಡಿದಂತೆ ಕಾಣುತ್ತಿದೆ. ಉಪಕಥೆಯನ್ನು ಸೇರಿಸಿ ವೀಕ್ಷಕರ ಸಹನೆಯನ್ನು ಕೆಣಕುವುದರೊಂದಿಗೆ ಕುತೂಹಲಕ್ಕೆ ತಣ್ಣೀರು ಎರಚುತ್ತಿದೆ. ಧಾರಾವಾಹಿಯ ಮುಖ್ಯ ಭೂಮಿಕೆಯಾಗಿರುವ ಕೆಲವು ವಾರಗಳಿಂದ ಮಾಯವಾಗಿದ್ದಾರೆ.

—ರಮಾನಂದ ಶರ್ಮಾ, ಬೆಂಗಳೂರು

ನೀರಸ: ಕನ್ನಡತಿ ಧಾರಾವಾಹಿ ಎತ್ತ ಸಾಗುತ್ತಿದೆ. ನಿರ್ದೇಶಕರು ಬಹುಶಃ ಕಥೆಯ ಗಟ್ಟಿತನವನ್ನು ಉಳಿಸಿಕೊಳ್ಳದೆ ಏನೋ ಹೇಳಲು ಹೋಗಿ ಧಾರಾವಾಹಿಯನ್ನು ನೀರಸವಾಗುತ್ತಿದೆ. ಹರ್ಷ ಪಾತ್ರವನ್ನೇ ಸತ್ವ ಇಲ್ಲದಂತೆ ಮಾಡಲಾಗುತ್ತಿದೆ.

—ರಾಮಚಂದ್ರ ನಾಡಿಗ್

## ಮುತ್ತೈದೆ ಆದಿತ್ಯ

ಇತ್ತೀಚಿನ ಧಾರಾವಾಹಿಗಳಲ್ಲಿ ನಮ್ಮ ಆಚರಣೆ– ಪದ್ಧತಿಗಳ ಬಗ್ಗೆ ಬೆಳಕು ಚೆಲ್ಲುವ ಬದಲು ಅವುಗಳನ್ನು ವಿರೂಪಗೊಳಿಸಲಾಗುತ್ತಿದೆ. ಇದಕ್ಕೆ ಪಾರು ಉದಾಹರಣೆ. ಅದರಲ್ಲಿ 'ತಾಳಿ ಪೂಜೆ'ಯನ್ನು ಶುಭ ಗಳಿಗೆಯಲ್ಲಿ ಮುತ್ತೈದೆಯರಿಂದ ಮಾಡಿಸಿದರೆ ಗಂಡನಿಗೆ ಒಳಿತು ಎಂದು ಪಾರು ದೇವಸ್ಥಾನಕ್ಕೆ ಹೋಗುತ್ತಾಳೆ. ಮುತ್ತೈದೆಯರು ಸಿಗದೇ ಆದಿತ್ಯನೇ ಅರ್ಚಕರ ಆಣತಿಯಂತೆ ಪಾರುವಿನ ತಾಳಿ ಪೂಜೆ ಮಾಡುತ್ತಾನೆ. ಆ ಮೂಲಕ ಆದಿತ್ಯನಿಗೆ ಮುತ್ತೈದೆ ಭಾಗ್ಯ ಕಲ್ಪಿಸಿದ್ದಾರೆ.

ನಮ್ಮಲ್ಲಿ 'ಕದಲಾರತಿ' ಎಂಬ ಸಂಪ್ರದಾಯವಿದೆ. ದೃಷ್ಟಿ ತೆಗೆಯುವುದು ಎಂಬ ಅರ್ಥದಲ್ಲಿ ನೀರಿಗೆ ಕುಂಕುಮ ಬೆರೆಸಿ ನವ ವಿವಾಹಿತರಿಗೆ ಆರತಿ ಎತ್ತುತ್ತಾರೆ. ಈಗಿನ ಧಾರಾವಾಹಿಗಳಲ್ಲಿ ಕುಂಕುಮದ ನೀರಿನ ಜೊತೆ ದೀಪ, ಅಚ್ಚುಬೆಲ್ಲ ಕರ್ಪೂರ ಹಚ್ಚಿ ಆರತಿ ಮಾಡುತ್ತಾರೆ. ಮನೆಯ ಕಾರ್ಯಕ್ರಮದಲ್ಲಿ 'ಗಂಗಾರತಿ' ತರಹದ ದೊಡ್ಡ ಆರತಿ ಎತ್ತುತ್ತಾರೆ. 'ಗಟ್ಟಿಮೇಳ'ದಲ್ಲಿ ಆದ್ಯಾಳಿಗೆ ಬಯಕೆ ಸಮಯದಲ್ಲಿ ಗಂಡಸರೇ ಆರತಿ ಎತ್ತುವುದೂ ವಿಶೇಷವೇ.

ತಾಳಿಯನ್ನು 'ಅಸ್ತ್ರ'ದಂತೆ ಬಿಂಬಿಸುತ್ತಾರೆ. ಎಲ್ಲರ ಜೇಬಿನಲ್ಲೂ ಒಂದು ಅರಿಶಿನದ ಕೊಂಬು ಕಟ್ಟಿದ ತಾಳಿ ಇದ್ದೇ ಇರುತ್ತದೆ. 'ಕಮಲಿ'ಯಲ್ಲಿ ಹೋಗಿ ನಿದ್ರಾವಸ್ಥೆಯಲ್ಲಿರುವ ರಚನಾಗೆ ಅಮರ್ ತಾಳಿ ಕಟ್ಟಿಸಿದ್ದಾರೆ.

—ವಾ. ಮುರಳೀಧರ, ತೀರ್ಥಹಳ್ಳಿ